ಆದರೂ ಸಹ ಪ್ರತಿ ದಿನ ಈ ಗ್ರಾಮದ ಮುಖ್ಯ ರಸ್ತೆಯ ಕ್ರಾಸ್‌ವರೆಗೆ 12 ದುಂಡು ಸಾರಿಗೆ ಸುತ್ತುವಳಿಗಳು ಕಾರ್ಯಾಚರಣೆಯಲ್ಲಿರುತ್ತವೆ.

4. ಸಿಕಂದರಬಾದವಾಡಿ: ಈ ಗ್ರಾಮವು ಬಾಲ್ಕಿ–ಹಳ್ಳಿಖೇಡ (ಬಿ) ಮಾರ್ಗದಲ್ಲಿದ್ದು, ಗ್ರಾಮದ ರಸ್ತೆ ತುಂಬಾ ಕಚ್ಚಾ ರಸ್ತೆಯಾಗಿದ್ದು, ಮಾರ್ಗ ಮಧ್ಯ ಬರುವ ಸೇತುವೆ ಜಖಂ ಆಗಿದ್ದು ಬಸ್ ಕಾರ್ಯಾಚರಣೆಗೆ ಯೋಗ್ಯವಾಗಿರುವುದಿಲ್ಲ. ರಸ್ತೆಯ ಕ್ರಾಸ್‌ವರೆಗೆ ಪ್ರತಿ ದಿನ ಸುಮಾರು 13 ದುಂಡು ಸಾರಿಗೆ ಸುತ್ತುವಳಿಗಳು ಕಾರ್ಯಾಚರಣೆಯಲ್ಲಿರುತ್ತವೆ.

ಸದರಿ ಗ್ರಾಮಸ್ಥರು ಮೇಲಿನ ಮಾರ್ಗಗಳಲ್ಲಿ ಕಾರ್ಯಾಚರಣೆಯಲ್ಲಿರುವ ಸಾರಿಗೆಗಳ ಸೇವೆಯನ್ನು ಉಪಯೋಗಿಸಿಕೊಳ್ಳುತ್ತಿದ್ದಾರೆ.

ಆ) ಸದರಿ ಗ್ರಾಮಗಳಿಗೆ ಬಸ್ ಸಂಚಾರಕ್ಕೆ ಯೋಗ್ಯ ರಸ್ತೆ ಇಲ್ಲದ ಕಾರಣ ಸಾರಿಗೆ ಸೌಕರ್ಯ ಒದಗಿಸಲಾಗಿರುವುದಿಲ್ಲ. ಇದರಿಂದ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಬಸ್‌ಗಳ ಕಾರ್ಯಾಚರಣೆಗೆ ಯೋಗ್ಯ ರಸ್ತೆ ಕಲ್ಪಿಸಿದ ನಂತರ ಬಸ್ ಸೇವೆ ಇಲ್ಲದ ಗ್ರಾಮಗಳಿಗೆ ಬಸ್ ಸಂಚಾರ ಪ್ರಾರಂಭಿಸುವ ಬಗ್ಗೆ ಪರಿಶೀಲಿಸಿ ಕ್ರಮ ಜರುಗಿಸಲಾಗುವುದು.

ರಾಜ್ಯದಲ್ಲಿ ಬಂದೀಖಾನೆಗಳಲ್ಲಿ ಶಿಕ್ಷೆ ಅನುಭವಿಸುತ್ತಿರುವ ಖೈದಿಗಳು ಶಿಕ್ಷೆ ಮುಗಿಸಿ ಹೊರಬಂದ ನಂತರ ಅವರ ಜೀವನ

53 (322) ಶ್ರೀ ನರೇಂದ್ರ ಬಾಬು. ಸಿ.ಎಲ್. (ಮಹಾಲಕ್ಷ್ಮಿ ಲೇಔಟ್) : ಮಾನ್ಯ ಸಮಾಜ ಕಲ್ಯಾಣ ಹಾಗೂ ಬಂದೀಖಾನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;–

ಅ) ರಾಜ್ಯದ ವಿವಿಧ ಬಂದೀಖಾನೆಗಳಲ್ಲಿ ಶಿಕ್ಷೆ ಅನುಭವಿಸುತ್ತಿರುವ ಖೈದಿಗಳು ತಮ್ಮ ಶಿಕ್ಷೆ ಮುಗಿಸಿ ಹೊರಬಂದ ನಂತರ ಉತ್ತಮ ಜೀವನ

ನಡೆಸುವಂತೆ ಜೈಲುಗಳಲ್ಲಿ ಯಾವುದಾದರೂ ವೃತ್ತಿ ಶಿಕ್ಷಣ/ತರಬೇತಿ ನೀಡಲಾಗುತ್ತಿದೆಯೇ;

ಆ) ಶಿಕ್ಷಣ ಅವಧಿಯ ನಂತರ ತಯಾರಿಸಿರುವ ಉತ್ಪನ್ನಗಳಿಗೆ ಸೂಕ್ತ ಮಾರುಕಟ್ಟೆ (ಮಾರ್ಕೆಟಿಂಗ್) ವ್ಯವಸ್ಥೆ ಕಲ್ಪಿಸಿದೆಯೇ;

ಇ) ಖೈದಿಗಳ ಸ್ವಂತ ಉದ್ಯೋಗಕ್ಕೆ ಆರ್ಥಿಕ ನೆರವು/ಸಾಲ ನೀಡುತ್ತಿದೆಯೇ;

ಈ) ಶಿಕ್ಷೆಯ ಅವಧಿ ಮುಗಿದ ನಂತರ ಅವರು ಬದುಕು ರೂಪಿಸಿಕೊಳ್ಳಲು ಸರ್ಕಾರದಿಂದ ಇರುವ ಅನುಕೂಲ ಸೌಲಭ್ಯಗಳೇನು?

ಶ್ರೀ ಎ ನಾರಾಯಣಸ್ವಾಮಿ (ಸಮಾಜ ಕಲ್ಯಾಣ ಮತ್ತು ಬಂದೀಖಾನೆ ಸಚಿವರು) ;–

ಅ) ಹೌದು

ರಾಜ್ಯದ ಎಲ್ಲಾ ಕೇಂದ್ರ ಕಾರಾಗೃಹಗಳಲ್ಲಿ ಶಿಕ್ಷೆ ಅನುಭವಿಸುತ್ತಿರುವ ಬಂದಿಗಳಿಗೆ ಹೊಲಿಗೆ ಜಮಖಾನೆ ನೇಯ್ಗೆ, ಬಟ್ಟೆ ನೇಯ್ಗೆ, ಬಡಗಿ, ಬೇಕರಿ, ಮುದ್ರಣ, ಕಮ್ಮಾರಿಕೆ, ಸೋಪು ಮತ್ತು ಫಿನಾಯಿಲ್ ತಯಾರಿಕೆ, ವ್ಯವಸಾಯ ಚಟುವಟಿಕೆ ಇತ್ಯಾದಿಗಳಲ್ಲಿ ವೃತ್ತಿ ತರಬೇತಿ ನೀಡಲಾಗುತ್ತಿದೆ.

ಆ) ಇಲ್ಲ.

ಕಾರಾಗೃಹಗಳಲ್ಲಿ ಉತ್ಪಾದಿಸುವ ಬಟ್ಟೆ, ಜಮಖಾನೆ, ಕಂಬಳಿ ಇತ್ಯಾದಿಗಳನ್ನು ಬಹುತೇಕವಾಗಿ ಕಾರಾಗೃಹವಾಸಿಗಳ ಅಗತ್ಯತೆಗೆ ಉಪಯೋಗಿಸಲಾಗುತ್ತಿದೆ. ಬಟ್ಟೆಗಳು, ಬೆಡ್‌ಶೀಟ್‌ಗಳು ಇತ್ಯಾದಿಗಳನ್ನು ಕೇಂದ್ರ ಕಾರಾಗೃಹದ ಉಗ್ರಾಣಗಳಲ್ಲಿ ಸಾರ್ವಜನಿಕರಿಗೆ ಮಾರಾಟ ಮಾಡಲಾಗುತ್ತಿದೆ.

ಇ) ಕಾರಾಗೃಹ ಇಲಾಖೆಯಿಂದ ಯಾವುದೇ ಆರ್ಥಿಕ ನೆರವು ಸಾಲ ನೀಡಲಾಗುತ್ತಿಲ್ಲ.

ಈ) ಕಾರಾಗೃಹ ಇಲಾಖೆಯಿಂದ ಈ ಬಗ್ಗೆ ಯಾವುದೇ ಸೌಲಭ್ಯಗಳನ್ನು ನೀಡಲಾಗುತ್ತಿಲ್ಲ.